ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳನ್ನು ನಿರ್ಮಿಸುವ ಸಲುವಾಗಿ ಖರೀದಿಸಲಾದ ಅಡಿಗಟ್ಟುಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

1995-96	1300
1996-97	1358
1997-98	1983
ಒಟ್ಟು	4641

ಆ) ಮೇಲ್ಕಂಡ ಬಸ್‌ಗಳಿಗೆ ತಗಲಿದ ವೆಚ್ಚ ಈ ಕೆಳಕಂಡಂತೆ ನೀಡಲಾಗಿದೆ.

1995-96 - ರೂ.78.47 ಕೋಟಿಗಳು

1996-97 - ರೂ.77.25 ಕೋಟಿಗಳು

1997-98 - ರೂ. 134.00 ಕೋಟಿಗಳು

ಇ) 1997-98ರ ಮಾರ್ಚ್ ತಿಂಗಳಲ್ಲಿ ಖರೀದಿಸಲಾದ 309 ವಾಹನಗಳು ವಿನಃ ಉಳಿದ ಎಲ್ಲಾ ವಾಹನಗಳನ್ನು ಈಗಾಗಲೇ ಸಂಚಾರಕ್ಕೆ ಬಿಡುಗಡೆ ಮಾಡಲಾಗಿದೆ. 1998 ಮಾರ್ಚ್‌ನಲ್ಲಿ ಖರೀದಿಸಲಾದ ವಾಹನಗಳ ಪೈಕಿ 309 ವಾಹನಗಳು ವಿವಿದ ಹಂತದಲ್ಲಿದ್ದು 1998ರ ಏಪ್ರಿಲ್ ಹಾಗೂ ಮೇ ತಿಂಗಳ ಒಳಗಾಗಿ ಎಲ್ಲಾ ವಾಹನಗಳನ್ನು ಸಂಚಾರಕ್ಕೆ ಬಿಡುಗಡೆ ಮಾಡಲಾಗುವುದು.

ಈ) ರಾಜ್ಯ ರಸ್ತೆ ಸಾರಿಗೆಯ 3 ನಿಗಮಗಳಿಂದ ಸೇರಿ ಒಟ್ಟು 10692 ಪ್ರಯಾಣಿಕರ ವಾಹನಗಳಿವೆ. ಈ ವಾಹನಗಳ ವಿವರಗಳು ಕೆಳಗೆ ನೀಡಲಾಗಿದೆ.

ಅ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ	5408
ಆ. ವಾಯುವ್ಯ ಕರ್ನಾಟಕ ಸಾರಿಗೆ ಸಂಸ್ಥೆ	3233
ಇ. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ.	2051
ಒಟ್ಟು	10692

ವಿಷಯ: ತಿರುಪತಿ ಕರ್ನಾಟಕ ರಾಜ್ಯ ಛತ್ರದ ಆದಾಯ ಕುರಿತು.

ಶ್ರೀ ಯು.ಆರ್.ಸಭಾಪತಿ (ಉಡುಪಿ): ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಪತ್ರ ತಿರುಪತಿ ಇಲ್ಲಿ 1995-96, 1996-97, 97-98 ಮಾರ್ಚ್‌ರವರೆಗೆ ಬಂದಿರುವ ಆದಾಯವೆಷ್ಟು? (ವರ್ಷವಾರು ಮಾಹಿತಿ ಸಲ್ಲಿಸುವುದು)

ಆ) ಅಷ್ಟು ಆದಾಯವಿದ್ದರೂ ಅಲ್ಲಿನ ಕೆಲವು ಕಾಟೇಜ್‌ಗಳಿಗೆ ಸುಣ್ಣಬಣ್ಣ, ಲೈಟ್, ಬೆಡ್‌ಶೀಟ್‌ಗಳು ಕಡಿಮೆ ಇರುವುದರಿಂದ ಇದನ್ನು ತೆಗೆದುಕೊಳ್ಳಲು ಕ್ರಮ ತೆಗೆದುಕೊಂಡಿರುವುದೇ? (ವಿವರ ನೀಡುವುದು)

ಶ್ರೀ ಬಿ.ಮುನಿಯಪ್ಪ (ಮುಜರಾಯಿ ಸಚಿವರು):

ಅ) 1995-96 ರೂ.23,18,956-00, 1996-97 ರೂ. 19,15,000-00, 1997-98 ರೂ.29,60,829-00 ಈ ಮೊತ್ತದಲ್ಲಿ ಕೆಎಸ್‌ಟಿಡಿಸಿ - ಕೆಎಸ್‌ಸಿ, ತಿರುಮಲ ಗುತ್ತಿಗೆಯ ಬಾಕಿ ಮೊತ್ತ ರೂ.4,78,069-00 ಒಳಗೊಂಡಿರುತ್ತದೆ.

ಆ) ಸಿಬ್ಬಂದಿ ಸಂಬಳ, ಲೈಟ್, ನೀರು ಮತ್ತಿತರ ನಿರ್ವಹಣಾ ವೆಚ್ಚಗಳಿಗೆ ಈ ಹಣ ಖರ್ಚಾಗುತ್ತಿದೆ. ತಿರುಮಲ-ತಿರುಪತಿ ಕರ್ನಾಟಕ ರಾಜ್ಯ ಛತ್ರದ ಆವರಣದಲ್ಲಿ ದಾನಿಗಳ ವತಿಯಿಂದ ನಿರ್ಮಿಸಲಾಗಿರುವ ಒಟ್ಟು 17 ಕಾಟೇಜುಗಳು ಇದ್ದು 14ನೇ ಕಾಟೇಜ್ ಛತ್ರದ ನಿಧಿಯಿಂದ ಇತ್ತೀಚಿಗೆ ನವೀಕರಿಸಲಾಗಿದೆ. ಅದೇ ರೀತಿ 16ನೇ ಕಾಟೇಜ್‌ನ್ನು ಮೂಲ ದಾನಿಗಳು ನವೀಕರಿಸಿದ್ದಾರೆ. ಇದಲ್ಲದೇ 8 ಮತ್ತು 10ನೇ ಕಾಟೇಜುಗಳನ್ನು ನವೀಕರಿಸಲು ಅನುಮತಿ ನೀಡಿದ್ದು ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಉಳಿದ ಕಾಟೇಜುಗಳನ್ನು ಎರಡನೇ ದಾನಿಗಳ ಯೋಜನೆಯಡಿಯಲ್ಲಿ ಅಥವಾ ಸರ್ಕಾರದ ಅನುದಾನದಿಂದ ಹಾಗೂ ಕೆಲಸವನ್ನು ಛತ್ರದ ಉಳಿತಾಯದಿಂದ ನವೀಕರಿಸಲು ಕ್ರಮ ಕೈಗೊಳ್ಳಲಾಗುವುದು.

ವಿಷಯ: ರಾಜ್ಯದಲ್ಲಿರುವ ನಿವೇಶನ ಹಾಗೂ ವಸತಿ ರಹಿತರು.

1157 (1633)

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ (ಚಾಮರಾಜ): ಮಾನ್ಯ ಶ್ರೀ ಹೆಚ್.ಡಿ.ರೇವಣ್ಣ, ಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯಾದ್ಯಂತ ಇತ್ತೀಚೆಗೆ ನಡೆಸಿದ ಸಮೀಕ್ಷೆಯ ಪ್ರಕಾರ ಮೈಸೂರು ನಗರದಲ್ಲಿರುವ ನಿವೇಶನ ರಹಿತರ ಹಾಗೂ ವಸತಿ ರಹಿತರ ಸಂಖ್ಯೆ ಎಷ್ಟು?

ಆ) ಇವರುಗಳಿಗೆ ನಿವೇಶನ ಅಥವಾ ವಸತಿ ನೀಡುವ ಬಗ್ಗೆ ಸರ್ಕಾರದವರು